ನೀರು ಕುಡಿದಷ್ಟು ಸಲೀಸಾಗಿ ಕೆಲಸವಾಗುತ್ತದೆ ಎನ್ನುವ ನಂಬಿಕೆ ಅವರದ್ದು. ತೆಲುಗಿನ 'ದೊಂಗವೊಗಡು'ವೊಬ್ಬನಿಗೆ 13 ನಂಬರಿನ ಮೇಲೆ ವಿಶಿಷ್ಟ ಮಮಕಾರ. ಐವತ್ತು ಇಪ್ಪತ್ತರ 13 ನೋಟುಗಳನ್ನು ಜೋಡಿಸಿ ತಟ್ಟೆಯಲ್ಲಿಟ್ಟು ಪೂಜಾರಿಗೆ 'ಮನ ದೈವುಲ' ಮುಂದಿಟ್ಟು ಪೂಜೆ ಮಾಡ್ಕೊಡಣ್ಣಾ... ಅಂತ ದುಂಬಾಲು ಬೀಳುತ್ತಿದ್ದ. ಆ ನೋಟುಗಳನ್ನು ಬಳಸಿ ಎಂತವರನ್ನೂ ಬಲೆಗೆ ಕೆಡವಿ ಲಕ್ಷಾಂತರ ದೋಚುತ್ತಿದ್ದನೆಂದರೆ ಅವನ ಭಕುತಿಗೆ ಯಾರಾದರೂ ತಲೆಬಾಗಲೇಬೇಕು !

ಹೌದಪ್ಪಾ... ಅಂಥ ಗ್ರಾಮಗಳಿಗೆ ವೆಹಿಕಲ್ಲು ನುಗ್ಗಿಸಿ ಎಲ್ಲರನ್ನು ಹೆಡೆಮುರಿ ಕಟ್ಟಿಕೊಂಡು ಬಂದು ಜೈಲಿನ ದಾರಿ ತೋರಿಸಿದರಾಗುವುದಿಲ್ಲವೇ? ಎಂಬ ಪ್ರಶ್ನೆ ಕೇಳುವವರಿದ್ದಾರೆ. ಅಂತಹವರಿಗೆ ಅಲ್ಲಿನ ಪರಿಸ್ಥಿತಿಗಳ ಅರಿವಿರಲಾರದು. ಅಲ್ಲಿಗೆ ಹೋಗಿ ಬಂದ ಅಧಿಕಾರಿಯೊಬ್ಬರು ಹೇಳುತ್ತಿದ್ದರು. “ಇಡೀ ಗ್ರಾಮವೇ ಹಾಳು ಕೊಂಪೆಯಂತಿರ್ತದೆ ಕಣ್ರೀ... ಗಂಡಸ್ರೆಲ್ಲಾ ಕಸುಬಿನ ಮೇಲೆ ಹೊರಬಿದ್ದಿರ್ತಾರೆ. ಬರೀ ಹೆಂಗಸ್ರು ಮಕ್ಳು ಮುದುಕ್ರು ಮಾತ್ರ ಇರ್ತಾರೆ. ಎಲ್ಲರೂ ಒಬ್ರಿಗೊಬ್ಬರು ಪರಿಚಿತರು. ನೀವು ಹೋಗಿ ಯಾರನ್ನಾದ್ರೂ ಕೇಳಿ... ಗೊತ್ತಿಲ್ಲ ಅಂತ ತಲೆಯಾಡಿಸುತ್ತಾರೆ. ಒಂದು ಹೊಸ ಮುಖ ಕಂಡರೆ ಸಾಕು, ಇಡೀ ಹಳ್ಳಿಯೇ ಅಲರ್ಟ್ ಆಗಿಬಿಡ್ತದೆ. ಎಲ್ರೂ ನಿಮ್ಮ ಮುಖಾನೆ ವಿಚಿತ್ರವಾಗಿ ನೋಡ್ತಾ ನಿಂತುಬಿಡ್ತಾರೆ. ಇದರ ಜೊತೆಗೆ ಸ್ಥಳೀಯ ಪೊಲೀಸರ ಅಸಹಕಾರ ಬೇರೆ. ಅವರೂ ಕೈ ಜೋಡಿಸಿರ್ತಾರೆ ಅಂತಲ್ಲ. ಯಾವನಿಗ್ ಬೇಕು ಇಲ್ಲದ ಉಸಾಬರಿ ಅನ್ನೋ ನಿರ್ಲಕ್ಷ್ಯ ಅಷ್ಟೆ. ಊಹೂಂ... ಅಂತಹ ಕಡೆ ನುಗ್ಗಿ ಯಾರನ್ನಾದ್ರೂ ಕರೆದುಕೊಂಡು ಬರುವುದು ಅಸಾಧ್ಯದ ಮಾತು. ಇನ್ನೂ ಇಲ್ಲೇ ಯಾವಾಗ್ಲಾದ್ರೂ ಅದೃಷ್ಟ ಕೈಕೊಟ್ಟು ಸಿಕ್ಕಿಬಿದ್ರೆ ಅದೇ ಲಕ್ಕು ಅನ್ನೋಬೇಕು ಅಷ್ಟೇ...” ಅಂದಿದ್ದರು.

ಅದೂ ಆಗಿದೆ. ಕೆಲವೊಮ್ಮೆ ದೈವ ಅವರದೂ ಮುನಿದಿದೆ. ಎಂಥಾ ಆಟಗಾರನಾದರೂ ಪ್ರತಿ ಪಂದ್ಯ ಗೆಲ್ಲೋದಕ್ಕಾಗುವುದಿಲ್ಲ ಅನ್ನೋದು ಹಳೇ ಸತ್ಯ. ಒಮ್ಮೆ ಸಾರ್ವಜನಿಕರಿಗೆ, ಮಗದೊಮ್ಮೆ ಪೊಲೀಸರಿಗೆ ಸಿಕ್ಕಿ ಬೀಳುತ್ತಾರೆ. ಆದರೆ ಏಳೆಂಟು ಜನರ ಗ್ಯಾಂಗಿನಲ್ಲಿ ಸಿಕ್ಕುವವ ಮಾತ್ರ ಒಬ್ಬನೇ. ಒಬ್ಬ ಸಿಗುತ್ತಿದ್ದಂತೆ ಉಳಿದವರು ಅಲ್ಲಲ್ಲೇ ಚದುರಿಬಿಡುತ್ತಾರೆ. ಅದಕ್ಕಾಗಿ ಅವರಲ್ಲಿ ವಿಷಾದವಿಲ್ಲ. ಆಲ್ ಇನ್ ದ ಗೇಮ್... ಎಷ್ಟಾದರೂ ದೈವವನ್ನು ನಂಬುವವರಲ್ಲವೇ? ಇದೂ ಕೂಡ ದೈವ ನಿಯಾಮಕವೇ ಅಂದುಕೊಳ್ಳುತ್ತಾರೆ. ತಮ್ಮ ಲಾಯರುಗಳನ್ನು ಸಂಪರ್ಕಿಸಿ ದುಡ್ಡು ಸುರಿದು ಜಾಮೀನು ಕೊಟ್ಟು ಅವನನ್ನು ಬಿಡಿಸಿಕೊಳ್ಳುತ್ತಾರೆ.

ಇನ್ನು ಸಿಕ್ಕಿಬಿದ್ದವನ ಕಥೆ ಏನು ಎಂಬುದನ್ನು ನೋಡೋಣ... ಅವನ ಬಾಯಿಬಿಡಿಸಲು ನೀವು ಸಫಲರಾದಿರೋ ನಿಮ್ಮಂಥ ಸಮರ್ಥ ಆಫೀಸರು ಬೇರೊಬ್ಬರಿಲ್ಲ. ಏಕೆಂದರೆ ನೀವು ಕಲಿತ ವಿದ್ಯೆಯೆಲ್ಲಾ ಖರ್ಚು ಮಾಡಿದರೂ ಅವನಿಂದ ವಿಷಯ ಹೊರಡಿಸಲಾರಿರಿ. ಬಲಪ್ರಯೋಗಕ್ಕೆ ಮುಂದಾದಿರೋ... ನಿಂತನಿಂತಲ್ಲೇ ಬೆರಳು ಬಾಯಿಗಿಟ್ಟು ವಾಂತಿ ಮಾಡಿಕೊಳ್ಳುತ್ತಾರೆ. ಎದೆ ಹಿಡಿದುಕೊಂಡು ಅಲ್ಲೇ ಕುಸಿದುಬಿಡುತ್ತಾರೆ. ಇಲ್ಲವೇ ಬಾಯಿ ತುಂಬಾ ನೊರೆ ಉಕ್ಕಿಸಿಕೊಂಡು ಫಿಟ್ಸು ಬಂದವರಂತೆ ತರತರನೆ ನಡುಗುತ್ತಾರೆ. ನೀವು ಯಾವುದಕ್ಕೂ ಜಗ್ಗದೆ ಲಾಠಿ ಕೈಗೆತ್ತಿಕೊಂಡರೆ ಪ್ಯಾಂಟು ಪೈಜಾಮಗಳಲ್ಲೇ ಮಲಮೂತ್ರಗಳನ್ನು ವಿಸರ್ಜಿಸಿಕೊಂಡು ನೀವು ಹತ್ತಿರಕ್ಕೂ ಬರದಂತೆ ಮಾಡಿಬಿಡುತ್ತಾರೆ. “ನಿಮ್ಮನ್ನು ಕಂಡು ಭಯದಿಂದ ಹಾಗೆ ಮಾಡಿಕೊಂಡರೇನೋ ಅಂತ ನಿಮಗನಿಸುತ್ತದೆ... ಅಂಥ ಭ್ರಮೆ ಬೇಡ. ಎಂಥವೋ ಕೀಟಗಳು